**ದಿನಾಂಕ 08.01.2019 ರಂದು ಸಮಯ 11.30 ಗಂಟೆಗೆ ವಾರ್ಡ್ 162-ಗಿರಿನಗರ ವಾರ್ಡಿಗೆ ಸಂಬಂಧಿಸಿದಂತೆ ಸ್ವಾಮಿ ವಿವೇಕಾನಂದ ಉದ್ಯಾನವನದಲ್ಲಿ, ಗಿರಿನಗರ, ಇಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

***ಹಾಜರಿದ್ದವರು***

1.ಶ್ರೀಮತಿ ನಂದಿನಿ ವಿಜಯ್ ವಿಠಲ್, ಪಾಲಿಕೆ ಸದಸ್ಯರು - ಅಧ್ಯಕ್ಷರು
2.ಶ್ರೀಮತಿ ಸೂರ್ಯ ಕುಮಾರಿ, ಸಹಾಯಕ ಕಂದಾಯ ಅಧಿಕಾರಿ, ಗಿರಿನಗರ- ಕಾರ್ಯದರ್ಶಿ
3.ಶ್ರೀ ಟಿ.ರವಿ ಕುಮಾರ್- ಸದಸ್ಯರು
4.ಶ್ರೀಮತಿ ಮಂಜುಳ ಮಹದೇವ್- ಸದಸ್ಯರು
5.ಶ್ರೀಮತಿ. ಪುಷ್ಪ-ಸದಸ್ಯರು
6.ಶ್ರೀ ಎಸ್.ಎಂ.ಆರ್.ಪ್ರಸಾದ್-ಸದಸ್ಯರು
7.ಶ್ರೀ ನಂದ ರಾವ್-ಸದಸ್ಯರು
8.ಶ್ರಿ ಪ್ರಕಾಶ್ ವಿ.-ಸದಸ್ಯರು.

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ಸಮಿತಿ ಸಭೆಯ ಅದ್ಯಕ್ಷರು, ವಾರ್ಡ್ ಸಮಿತಿ ಸಧಸ್ಯರು, ಅಧಿಕಾರಿಗಳು ಮತ್ತು ನೆರೆದಿದ್ದ ಸಾರ್ವಜನಿಕರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಅಧ್ಯಕ್ಷರು, ಸ್ಥಳಿಯ ಪಾಲಿಕೆ ಸದಸ್ಯರ ಆದೇಶದ ಮೇರೆಗೆ ಸದರಿ ಸಭೆಯನ್ನು ಪ್ರತಿ ತಿಂಗಳ ಮೊದಲನೆ ಶನಿವಾರ ನಡೆಸಬೇಕೆಂದು ತಿಳಿಸಿರುವ ಮೇರೆಗೆ ದಿನಾಂಕ 05.01.2019 ರಂದು ನಡೆಯಬೇಕ್ಕಿದ್ದ ವಾರ್ಡ್ ಸಮಿತಿ ಸಭೆಯನ್ನು ಕಾರಣಾಂತರದಿಂದ ದಿನಾಂಕ 05.01.2019ರ ಬದಲಾಗಿ ದಿನಾಂಕ 08.01.2019 ರಂದು ವಾರ್ಡ್ ಕಮೀಟಿ ಸಭೆನೆಡೆಸಲಾಗಿದೆಯಂದು ಕೋರುತ್ತಾ ಸಭೆಯಲ್ಲಿ ಬಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು ಮತ್ತು ಅಧಿಕಾರಿಗಳನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

1. ಶ್ರೀ ಎಂ.ಎಸ್.ಆರ್.ಪ್ರಸಾದ್ ರವರು ವಾರ್ಡ್ ಸಂಖ್ಯೆ 162ರಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ನಿವೃತ್ತಿಯಾಗಿರುವ ಪೌರ ಕಾರ್ಮಿಕರುಗಳಿಗೆ ಗ್ರ್ಯಾಜಿಟಿ ಮೊತ್ತ ಮಂಜೂರಾಗಿರುವುದಿಲ್ಲವೆಂದು, 4ನೇ ಫೇಸ್‌ನಲ್ಲಿ ನಿರ್ಮಿಸಿರುವ ಹೊಸ ಕಟ್ಟಡಗಳಿಗೆ ಮತ್ತು ಈಗಿರುವ ನಿವೇಶನಗಳಿಗೆ ತೆರಿಗೆ ಪಾವತಿಸುತ್ತಿದಾರೆಯೇ ಅಥವಾ ಇಲ್ಲವೇ, ಕಂದಾಯ ಕ್ರೂಢೀಕರಣದ ಬಗ್ಗೆ, ವಾರ್ಡ್ ಸಂಖ್ಯೆ 162ರ ಗಿರಿನಗರದಲ್ಲಿರುವ ಕೇಕ್ ಆಫ್ ದಿ ಡೇ ಬೇಕರಿಯ ಪಕ್ಕದಲ್ಲಿರುವ ಮೋರಿಯನ್ನು ಮುಚ್ಚುವ ಬಗ್ಗೆ, ಕಾಮಗಾರಿ ಇಲಾಖೆಯವರಿಗೆ ಪ್ರೋಗ್ರಾಮ್ ಆಫ್ ವರ್ಕ್ಸ್ (POW) ನೀಡುವ ಬಗ್ಗೆ, ಕೇಕ್ ಆಫ್ ದಿ ಡೇ ಮುಂಭಾಗ ಪಾದಚಾರಿಯಲ್ಲಿ ಶೀಟ್ ಹಾಕಿ ಹೋಟಲ್ ನಡೆಸುತ್ತಿರುವ ಬಗ್ಗೆ ಮತ್ತು ಕಂದಾಯ ರಸೀದಿಯಲ್ಲಿ ಬೆಂಗಳೂರು ಎಂದು ಸೇರಿಸುವ ಬಗ್ಗೆ ಮಾನ್ಯ ಅಧ್ಯಕ್ಷರನ್ನು ಕೋರಿರುತ್ತಾರೆ.

<u>ಕ್ರಮ:- ಸಂಬಂಧಪಟ್ಟ ಅಧಿಕಾರಿಗಳಿಗೆ,</u>

ಈ ವಿಷಯವಾಗಿ ವಾರ್ಡ್ ಸಂಖ್ಯೆ 162ರಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ನಿವೃತ್ತಿಯಾಗಿರುವ ಪೌರ ಕಾರ್ಮಿಕರುಗಳಿಗೆ ಗ್ರ್ಯಾಜಿಟಿ ಮೊತ್ತ ಮಂಜೂರು ಮಾಡುವ ಬಗ್ಗೆ ಪರಿಸರ ಅಧಿಕಾರಿಗಳಿಗೆ ಕ್ರಮ ಕೈಗೊಳ್ಳಲು ಸೂಚಿಸುತ್ತಾ, 4ನೇ ಫೇಸ್‌ನಲ್ಲಿ ನಿರ್ಮಿಸಿರುವ ಹೊಸ ಕಟ್ಟಡಗಳಿಗೆ ಮತ್ತು ಈಗಿರುವ ನಿವೇಶನಗಳಿಗೆ ತೆರಿಗೆ ಪಾವತಿಸುತ್ತಿದಾರೆಯೇ ಅಥವಾ ಇಲ್ಲವೇ ಹಾಗೂ ಕಂದಾಯ ಕ್ರೂಢೀಕರಣದ ಬಗ್ಗೆ ಸಹಾಯಕ ಕಂದಾಯ ಅಧಿಕಾರಿ(ಗಿರಿನಗರ) ರವರಿಗೆ ಸೂಚಿಸಲಾಗಿ ಸಹಾಯಕ ಕಂದಾಯ ಅಧಿಕಾರಿ ರವರು 4ನೇ ಫೇಸ್ ಗಿರಿನಗರದ ನಿವೇಶನಗಳಿಗೆ ಬಿಬಿಎಂಪಿ ವತಿಯಿಂದ ಆಸ್ತಿ ತೆರಿಗೆ ನಿಗದಿಪಡಿಸಿರುವುದಿಲ್ಲವೆಂದು ಹಾಗೂ ಸದರಿ ವಿಷಯವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರಿಗೆ ಒಳಪಡುವುದಾಗಿ ತಿಳಿಸಿರುತ್ತಾರೆ, ಕಂದಾಯ ಕ್ರೂಢೀಕರಣದ ಬಗ್ಗೆ ವಾರ್ಡಿನ ಕಂದಾಯ ಪರಿವೀಕ್ಷಕರಿಗೆ Up-Date ಮಾಡಿಕೊಳ್ಳುವ ಬಗ್ಗೆ ಸೂಚಿಸುವುದಾಗಿ ತಿಳಿಸುತ್ತಾ, ವಾರ್ಡ್ ಸಂಖ್ಯೆ 162ರ ಗಿರಿನಗರದಲ್ಲಿರುವ ಕೇಕ್ ಆಫ್ ದಿ ಡೇ ಬೇಕರಿಯ ಪಕ್ಕದಲ್ಲಿರುವ ಮೋರಿಯನ್ನು ಮುಚ್ಚಲು ಹಾಗೂ ಕಾಮಗಾರಿ ಇಲಾಖೆಯವರಿಗೆ ಪ್ರೋಗ್ರಾಮ್ ಆಫ್ ವರ್ಕ್ಸ್ (POW) ನೀಡಲು ಮತ್ತು ಕೇಕ್ ಆಫ್ ದಿ ಡೇ ಮುಂಭಾಗ ಪಾದಚಾರಿಯಲ್ಲಿ ಶೀಟ್ ಹಾಕಿ ಹೋಟಲ್ ನಡೆಸುತ್ತಿರುವ ಬಗ್ಗೆ ವಾರ್ಡಿನ ಸಹಾಯಕ ಅಭಿಯಂತರರಿಗೆ ಕ್ರಮವಹಿಸಲು ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

ಕೌನ್ಸಿಲ್ ಕಾರ್ಯದರ್ಶಿ ಕಛೇರಿ

A V Nandini

ಕ್ರಮ ಸಂಖ್ಯೆ......102

ದಿನಾಂಕ......21-02-19